



# ತನಕಾ ಎಂಬ ಸೌಂದರ್ಯ ಲೇಪ

■ ಚಿತ್ರ–ಲೇಖನ: **ಉಚ್ಚಂಗಿ ಚಂದ್ರಶೇಖರ**

ಮಯನ್ಮಾರ್ (ಹಳೆಯ ಹೆಸರು ಬರ್ಮಾ) ದೇಶದ ಹೊಸ ರಾಜಧಾನಿಯಾದ ನೇಪಿಡಾದ ವಿಮಾನ ನಿಲ್ದಾಣಕ್ಕೆ ಬಂದಿಳಿದ ನನ್ನನ್ನು ಆ ದೇಶದ ಅರಣ್ಯ ಸಂಶೋಧನಾ ಸಂಸ್ಥೆಗೆ ಕರೆದೊಯ್ಯಲು ಬಂದಿದ್ದ ಡಾ. ಇ ಇ ಸ್ವೆ ಹ್ಲಾಂಗ್(**Dr. Ei Ei Swe Hlaing**) ಅವರ ಮುಖವನ್ನು ನೋಡಿ ನನಗೆ ಸ್ವಲ್ಪ ಗಾಬರಿಯಾಯ್ತು! ಅವರು ಮುಖಕ್ಕೆ ಏನನ್ನೋ ಹಚ್ಚಿಕೊಂಡಿದ್ದರು. ಮುಖದ ಮೇಲೇನಾದರೂ ಕೊಳೆಯಾಗಿದೆಯೇನೋ ಎಂದು ಅನುಮಾನಿಸಿದೆ. ಆದರೆ ಕೇಳಲು ಹೋಗಲಿಲ್ಲ ಹೊಸ ಪರಿಚಯವಲ್ಲವೇ.

ಮಾರನೆಯ ದಿನ, ಅವರ ಸಂಸ್ಥೆಯಲ್ಲಿನ ಕಾರ್ಯಕ್ರಮಕ್ಕೆ ಹೋದ ನನಗೊಂದು ಆಶ್ಚರ್ಯ ಕಾದಿತ್ತು. ಸ್ತ್ರೀ –ಪುರುಷರು ಎನ್ನುವ ವ್ಯತ್ಯಾಸವಿಲ್ಲದೆ ಅಲ್ಲಿನ ಬಹುತೇಕ ಉದ್ಯೋಗಿಗಳು ವಿವಿಧ ರೀತಿಗಳಲ್ಲಿ, ವಿವಿಧ ಆಕೃತಿಗಳಲ್ಲಿ ಮುಖಕ್ಕೆ ಏನನ್ನೋ ಹಚ್ಚಿಕೊಂಡಿದ್ದರು. ಅದನ್ನು ಕಂಡ ನನಗೆ ಕುತೂಹಲ ತಡೆಯಲಾಗಲಿಲ್ಲ. ‘ಮೇಡಂ, ನೀವೆಲ್ಲಾ ಮುಖಕ್ಕೆ ಹಚ್ಚಿಕೊಂಡಿರುವುದೇನು?’ ಎಂದು ಡಾ. ಇ ಇ ಯವರನ್ನು ಸಂಕೋಚಬಿಟ್ಟು ಕೇಳಿಯೇ ಬಿಟ್ಟೆ.

ಆಗವರು ನಗುತ್ತಾ ‘ಓಹ್! ಇದು ತನಕಾ. ಇದನ್ನು ಹಚ್ಚಿಕೊಳ್ಳುವುದು ನಮ್ಮ ಪರಂಪರಾಗತ ಪದ್ಧತಿ’ ಎಂದು ಹೇಳಿದಾಗ ಹೆಮ್ಮೆಯಿಂದ ಅವರ ಕಣ್ಣುಗಳಲ್ಲಿ ಕಾಂತಿ ಮೂಡಿತ್ತು. ಪಕ್ಕದಲ್ಲೇ ನಿಂತಿದ್ದ ಶ್ರೀ. ಮಿಂಗ್ವಿ (**Myint Ngwe**) ಅವರನ್ನು ತನಕಾವನ್ನು ಹೇಗೆ ಮಾಡುತ್ತಾರೆ ಹಾಗೂ ಬಳಸುವ ವಸ್ತುಗಳೇನು ಎಂದು ಕೇಳಿದೆ. ಅದಕ್ಕವರು, ಕಾರ್ಯಕ್ರಮ ಮುಗಿದ ನಂತರ ಹೇಳುತ್ತೇನೆಂದರು.

ಕಾರ್ಯಕ್ರಮ ಮುಗಿಯಿತು. ಮಿಂಗ್ವಿಯವರು ನನ್ನನ್ನು ‘ಬನ್ನಿ, ಗೆಸ್ಟ್‌ಹೌಸ್‌ಗೆ ನಡೆದು ಹೋಗೋಣ ಎಂದು ಕರೆದರು. ದಾರಿಯಲ್ಲಿ ಸಣ್ಣದೊಂದು ಮರವನ್ನು